ತಲೆಯೊಡ್ಡುತ್ತಾರೆ. ನೇಣಿಗೆ ಹಾಕಿಕೊಂಡವರು ಬದುಕಿ ಉಳಿಯುವುದು ಕಷ್ಟ. ನಿದ್ದೆ ಮಾತ್ರೆ, ಪಾಯಿಸನ್ ತೆಗೆದುಕೊಂಡವರನ್ನು ಬದುಕಿಸಿಕೊಳ್ಳುವ ಚಾನ್ಸಸ್ ಸ್ವಲ್ಪಮಟ್ಟಿಗಾದರೂ ಇರುತ್ತದೆ.'' ಡಾಕ್ಟರ್ ನಾಗರಾಜ ಮೂರ್ತಿಯವರ ವಿಶ್ಲೇಷಣೆ ಕೇಳಿ ಋಗ್ವೇದಿಯವರಿಗೆ ಅಚ್ಚರಿಯಾಗಿತ್ತು. ``ಇವ ವೆಂಟೇಶ್ ಯಾದವ್ ಅವಿವೇಕಿ, ಎಂಥ ಎಡವಟ್ಟು ಮಾಡಿಕೊಂಡ.'' ಋಗ್ವೇದಿ ತಮ್ಮಷ್ಟಕ್ಕೆ ತಾವೇ ಗೊಣಗಿಕೊಂಡಿದ್ದರು. ``ಯಾರಯ್ಯ ಅವನು ವೆಂಕಟೇಶ್ ಯಾದವ್?'' ನಾಗರಾಜ ಮೂರ್ತಿ ಎಂದು ಕೇಳಿದಾಗ ಋಗ್ವೇದಿ, ಹಿಂದಿನ ಯೂನಿವರ್ಸಿಟಿಯ ದಿನಗಳ ಬಗ್ಗೆ ಹೇಳಿದ್ದರು. ``ಆಂ, ನೆನಪಾಯಿತು ಬಿಡು, ಅವನಿಗೇನಾಗಿತ್ತು? ಒಂದಷ್ಟು ದಿನ ಸಿನಿಮಾ ತೆಗಿತಿನಿ ಅಂತ ಯಾರೋ

